<u>ಅಸಲು ದಾವಾ ಸಂಖ್ಯೆ **- 237/2012**</u> ಪಿ.ಡಬ್ಲ್ಯೂ.**:-1**

ದಿನಾಂಕಃ **02.02.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು **:- 3** ನೇ ಪ್ರತಿವಾದಿ ಪರ ವಕೀಲರಿಂದ **:-**</u>

ನಿಪಿ-**20** ಮತ್ತು **21** ರ ದಾಖಲೆಯಲ್ಲಿ ಖಾತೆ ನಂ. **30** ಮತ್ತು **38** ರ ಆಸ್ತಿಯು ಶಿವಪ್ಪ ಬಿನ್ ಬಸಪ್ಪ ಕರಗೋಳಿರವರಿಗೆ ಹೇಗೆ ಬಂತು ಎಂಬುಂದರ ಬಗ್ಗೆ ನಮೂದಾಗಿಲ್ಲ ಎಂದರೆ ಸಾಕ್ಷಿಯು ಪಂಚಾಯಿತಿಯಲ್ಲಿ ಕೊಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ನಿಪಿ-**30** ರ ದಾಖಲೆಯು ಜಮೀನನ್ನು ಸೈಟ್ ಗಳಾಗಿ ಪರಿವರ್ತನೆ ಮಾಡಿರುವ ಬಗ್ಗೆ ಪ್ಲಾನ್. ನಿಪಿ-**30** ರ ದಾಖಲೆಯನ್ನು ಈಗೇ **2-3** ತಿಂಗಳ ಹಿಂದೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ಈ ದಾವೆಯ ಜೊತೆಯಲ್ಲಿ ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ನಿಪಿ-**30** ರ ದಾಖಲೆಯು ಜೆರಾಕ್ಸ್ ಕಾಫಿ ಎಂದರೆ ಸರಿ ಸಾಕ್ಷಿ ಮುಂದುವರೆದು ಸದರಿ ನಿಪಿ-**30** ರ ಮೂಲ ದಾಖಲೆಯು **1** ನೇ ಪ್ರತಿವಾದಿಯ ಬಳಿ ಇದೆ ಎಂದು ನನ್ನ ಮಾವ ಶಿವಪ್ಪರವರು ತಿಳಿಸಿರುತ್ತಾರೆ. ನಿಪಿ-**30** ದಾಖಲೆಯು **1** ನೇ ಪ್ರತಿವಾದಿಯ ಬಳಿ ಇರುವ ವಿಚಾರವನ್ನು ನನ್ನ ಮಾವ ಶಿವಪ್ಪರವರು ತಿಳಿಸಿದ್ದ ಬಗ್ಗೆ ನನ್ನ ವಾದ ಪತ್ರದಲ್ಲಿ ಆಗಲೀ ಅಥವಾ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆಗಲೀ ನಮೂದು ಮಾಡಿದ್ದೀರಾ ಎಂದರೆ ಸರಿ. ನಿಪಿ-**30** ರ ಮೂಲ ದಾಖಲೆಯು ಒಂದು ಇರುತ್ತದೆ. ಸಾಕ್ಷಿಗೆ ನಿಪಿ-**30** ರ ಮೂಲ ದಾಖಲೆಯನ್ನು ಸೈಟ್‌ಗಳನ್ನು ಖರೀದಿ ಮಾಡಿದ ಎಲ್ಲ ಖರೀದಿದಾರರಿಗೆ ಕೊಟ್ಟಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಿಪಿ-**30** ರ ಮೂಲ ದಾಖಲೆ **1** ನೇ ಪ್ರತಿವಾದಿಯ ಬಳಿ ಇದ್ದು ಅದನ್ನು ಖರೀದಿದಾರರಿಗೆ ಕೊಟ್ಟಿದಾರೆ ಅಥವಾ ಇಲ್ಲ ಎಂದು ನನಗೆ ಗೊತ್ತಿಲ್ಲ ಅದು ನನ್ನ ಮಾವನವರಿಗೆ ಗೊತ್ತು. ಸಾಕ್ಷಿಗೆ ನಿಮ್ಮ ಮಾವನವರು ಲೇಔಟ್ ಪ್ಲಾನ್ ನಲ್ಲಿ ನಮೂದಾಗಿರುವ ಸೈಟ್ ನ್ನು **1** ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ ಉಳಿದ ಸೈಟ್ ಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರ ಎಂಬ ಪ್ರಶ್ನೆಗೆ

ಸಾಕ್ಷಿಯು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಮಾವನವರು **1** ನೇ ಪ್ರತಿವಾದಿಗೆ ಸೈಟ್ ನ್ನು ಮಾರಾಟ ಮಾಡಿದ ನಂತರ ಬೇರೆ ಯವರಿಗೆ ಯಾವ ಯಾವ ಸೈಟ್ ಗಳನ್ನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.